

# ದೇಶದ ಮೊದಲ ಸಹಕಾರಿ ಆಸ್ಪತ್ರೆ

**ಬೆಳಗಾವಿ** ಜಿಲ್ಲೆ ಗೋಕಾಕ ತಾಲ್ಲೂಕಿನ ಘಟಪ್ರಭಾದಲ್ಲಿರುವ ಜೆ.ಜಿ. ಸಹಕಾರಿ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ 'ದೇಶದ ಮೊದಲ ಸಹಕಾರಿ ಆಸ್ಪತ್ರೆ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಆಸ್ಪತ್ರೆಯೀಗ 7 ದಶಕಗಳ ಹೊಸ್ತಿಲಲ್ಲಿದೆ.

1951ರಲ್ಲಿ ಘಟಪ್ರಭಾ ನದಿ ತೀರದ ಪ್ರಶಾಂತ ವಾತಾವರಣದಲ್ಲಿ ಮೈದಳೆದಿರುವ ಈ ಆಸ್ಪತ್ರೆ ಆ ಭಾಗದ ಜನರೊಂದಿಗೆ ಸಮೀಪದ ಹುಕ್ಕೇರಿ, ಚಿಕ್ಕೋಡಿ ಮೊದಲಾದ ತಾಲ್ಲೂಕುಗಳ ಜನರಿಗೂ ಕೈಗೆಟಕುವ ದರದಲ್ಲಿ ಆರೋಗ್ಯ ಸೇವೆ ಒದಗಿಸುತ್ತಿದೆ.

ಘಟಪ್ರಭಾ ಪರಿಸರದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಸಿಗುವಂತೆ ಮಾಡಬೇಕು ಎನ್ನುವ ಹುಬ್ಬಳ್ಳಿಯ ಮೂರು ಸಾವಿರ ಮಠದ ಲಿಂ. ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಕಳಕಳಿಯ ಫಲ ಈ ಆರೋಗ್ಯಧಾಮ. ಇಲ್ಲಿ ಗ್ರಾಮೀಣ ಮಕ್ಕಳಿಗೆ ವೈದ್ಯಕೀಯ ಹಾಗೂ ನರ್ಸಿಂಗ್ ಶಿಕ್ಷಣವನ್ನೂ ಕಲ್ಪಿಸಲಾಗುತ್ತಿದೆ. ಶ್ರೀಗಳು ನೀಡಿದ 68 ಎಕರೆ ಜಾಗ ಹಾಗೂ ಧನಸಹಾಯ ಸಂಸ್ಥೆಗೆ ಅಡಿಪಾಯವಾಗಿತ್ತು. ಅದರ ಆಧಾರದ ಮೇಲೆ ಆಸ್ಪತ್ರೆಯು ಅಭಿವೃದ್ಧಿ ಸಾಧಿಸುತ್ತಿದೆ. ಹೊರ ರೋಗಿಗಳ ವಿಭಾಗದೊಂದಿಗೆ ಆರಂಭವಾದ ಆಸ್ಪತ್ರೆಯಲ್ಲಿ ಕ್ರಮೇಣ ದಾನಿಗಳ ನೆರವಿನೊಂದಿಗೆ ಒಳ ರೋಗಿಗಳ ವಿಭಾಗ ಆರಂಭಿಸಲಾಗಿದೆ. ವೈದ್ಯಕೀಯ ಶಿಕ್ಷಣ, ಆರೋಗ್ಯ ಸೇವೆ ಹಾಗೂ ಶಿಕ್ಷಣದ ರೆಂಬೆ–ಕೊಂಬೆಗಳನ್ನು ಚಾಚಿಕೊಂಡು ಆಸ್ಪತ್ರೆ ವಿಸ್ತಾರಗೊಂಡಿದೆ.

ನಿತ್ಯ ಸರಾಸರಿ 300ಕ್ಕೂ ಹೆಚ್ಚು ಮಂದಿ ಹೊರ ರೋಗಿಗಳಾಗಿ ಮತ್ತು 50 ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಿತ್ಯ 8ರಿಂದ 10 ದೊಡ್ಡ ಪ್ರಮಾಣದ, 10ರಿಂದ 15 ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆಗಳು ಮತ್ತು ಐದಾರು ಹೆರಿಗೆಗಳು ಇಲ್ಲಿ ನಡೆಯುತ್ತಿವೆ.

150 ಹಾಸಿಗೆಗಳ ಅಲೋಪತಿ ಆಸ್ಪತ್ರೆ, 200 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ, 50 ಆಸ್ಪತ್ರೆಗಳ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಕೇಂದ್ರವಿದೆ. ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ಪ್ರಸ್ತುತ 100 ಸೀಟುಗಳಿಗೆ ಪ್ರವೇಶ ನೀಡಲಾಗುತ್ತಿದೆ. ಎಎನ್‌ಎಂ ಹಾಗೂ ಜಿಎನ್‌ಎಂ ಕೋರ್ಸ್‌ಗಳು ಒಳಗೊಂಡ ನರ್ಸಿಂಗ್ ಸ್ಕೂಲ್, ಬಿ.ಎಸ್ಸಿ. ಹಾಗೂ ಎಂ.ಎಸ್ಸಿ. ಕೋರ್ಸ್ ನೀಡುವ ನರ್ಸಿಂಗ್ ಕಾಲೇಜಿದೆ. ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಹಾಸ್ಟೆಲ್ ಸೌಲಭ್ಯವಿದೆ.

'ಹುಬ್ಬಳ್ಳಿಯ ಮೂರು ಸಾವಿರ ಮಠದ ಆಗಿನ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಅವರು ಸಮೀಪದ ಆಸ್ಪತ್ರೆಯೊಂದಕ್ಕೆ ರೋಗಿ ಒಬ್ಬರನ್ನು ಚಿಕಿತ್ಸೆಗೆಂದು ಕಳುಹಿಸಿದ್ದರಂತೆ. ಅಲ್ಲಿ ರೋಗಿಗೆ ಆರೈಕೆ ದೊರೆಯಲಿಲ್ಲವಂತೆ. ಹೀಗಾಗಿ, ಶ್ರೀಗಳಿಗೆ ಆಸ್ಪತ್ರೆ ಆರಂಭಿಸಲು ಪ್ರೇರಣೆ ಆಯಿತಂತೆ. ಅವರು ಸಹಕಾರ ತತ್ವದ ಮೇಲೆ ಆಸ್ಪತ್ರೆ ಸ್ಥಾಪನೆಗೆ ಕಾರಣವಾದರು. ಅಂದು ಶ್ರೀಗಳಿಗೆ ಆದ ನೋವು ಇಂದು ಸಾವಿರಾರು ಜನರಿಗೆ ಅನುಕೂಲ ಮಾಡಿಕೊಟ್ಟಿದೆ. 300ಕ್ಕೂ ಹೆಚ್ಚು ಮಂದಿಗೆ ಕೆಲಸ ಸಿಕ್ಕಿದೆ. ಶ್ರೀಗಳ ಆಶೀರ್ವಾದದಿಂದ ಆಸ್ಪತ್ರೆ ಬೆಳೆಯುತ್ತಿದೆ' ಎಂದು ಆಡಳಿತ ಮಂಡಳಿ ಅಧ್ಯಕ್ಷ ಬಸಗೌಡ ರಾಮಗೌಡ ಪಾಟೀಲ ಸ್ಮರಿಸಿದರು.

'ಪ್ರಕೃತಿ ಚಿಕಿತ್ಸೆ ಆಸ್ಪತ್ರೆಗೆ ನೆರೆಯ ಮಹಾರಾಷ್ಟ್ರ ಹಾಗೂ ಗೋವಾದಿಂದಲೂ ರೋಗಿಗಳು ಬರುತ್ತಾರೆ. ಘಟಪ್ರಭಾ ನದಿಯ ತಂಗಾಳಿಯು ಚಿಕಿತ್ಸೆಗೆ ನೆರವಾಗುತ್ತಿದೆ' ಎನ್ನುತ್ತಾರೆ ಅವರು.

■ **ಎಂ. ಮಹೇಶ**

ಆದಾಯದಲ್ಲಿ ಆಹಾರ, ಆರೋಗ್ಯ ಮತ್ತು ಶಿಕ್ಷಣ ವ್ಯವಸ್ಥೆಗೆ ಕೊಡಬೇಕಾದ ಆದ್ಯತೆಯನ್ನು ಕೊಡಲೇ ಇಲ್ಲ. ಉಚಿತವಾಗಿ ಲಭ್ಯವಾಗಬೇಕಾದ ಈ ಸೇವೆಗಳೇ ಇಂದು ಆರ್ಥಿಕತೆಯ ಕಪಿಮುಷ್ಟಿಯಲ್ಲಿ ಸೇರಿಕೊಂಡಿವೆ.

ಸರ್ಕಾರಿ ಆಸ್ಪತ್ರೆಗಳು ಸಶಕ್ತವಾಗಿರಬೇಕು, ಆ ಮೂಲಕ ಸಮಾಜದ ಕೊನೆಯ ವ್ಯಕ್ತಿಗೂ ಅತ್ಯುತ್ತಮವಾದ ಆರೋಗ್ಯ ಸೇವೆ ಲಭಿಸಬೇಕು ಎನ್ನುವ ಆಗ್ರಹ ಬಹುಕಾಲದಿಂದ ಕೇಳಿ ಬರುತ್ತಿದೆ. ಆರೋಗ್ಯ ಸೇವೆಯು ವ್ಯಕ್ತಿಯ ಘನತೆಯನ್ನು ಗೌರವಿಸುವ ವಿಧಾನವೂ ಹೌದು. 'ನಿನ್ನಲ್ಲಿ ಸಂಪತ್ತಿರಲಿ, ಇಲ್ಲದಿರಲಿ, ಈ ಸಮಾಜದ ಅಂಗ ನೀನು' ಎಂಬ ಸಮನ್ವಯತೆಯ ಭಾವ ಮೂಡಿಸುವುದು ಆರೋಗ್ಯ ಕ್ಷೇತ್ರ. ಆದರೆ ಪ್ರಸಕ್ತ ವ್ಯವಸ್ಥೆಯಲ್ಲಿ ಗುಣಮಟ್ಟದ ಆರೋಗ್ಯಸೇವೆಗಳು ಉಳ್ಳವರಿಗಷ್ಟೇ ಲಭ್ಯ.

## ಸಹಕಾರಿ ಎನ್ನುವ ಪರ್ಯಾಯ

ಕೊರೊನಾ ವೈರಸ್ ಸಮಾಜವನ್ನು ಕಂಗೆಡಿಸಿರುವ ಸಂದರ್ಭದಲ್ಲಿ ಆರೋಗ್ಯ ಕ್ಷೇತ್ರದತ್ತ ಎಲ್ಲರ ಗಮನ ಹರಿಯುವಂತಾಗಿದೆ. ಸರ್ಕಾರಿ ಆಸ್ಪತ್ರೆಗಳು ಕೋವಿಡ್ ಆಸ್ಪತ್ರೆಗಳಾಗಿ ಬದಲಾದ ಸಂದರ್ಭದಲ್ಲಿ ಸಾರ್ವಜನಿಕರು ಆರೋಗ್ಯ ಸೇವೆಗಳಿಗಾಗಿ ಖಾಸಗಿ ಆಸ್ಪತ್ರೆಗಳತ್ತ ಅನಿವಾರ್ಯವಾಗಿ ಮುಖ ಮಾಡುವಂತಾಗಿದೆ. ಆದರೆ ಉಚಿತ ಅಥವಾ ಸುಲಭ ಬೆಲೆಯಲ್ಲಿ ಚಿಕಿತ್ಸೆ ನೀಡುವ ಸರ್ಕಾರಿ ಆಸ್ಪತ್ರೆಗಳ ಸ್ಥಾನವನ್ನು ಖಾಸಗಿ ಆಸ್ಪತ್ರೆಗಳು ತುಂಬುವುದು ಸಾಧ್ಯವೇ? ಖಾಸಗಿ ಆಸ್ಪತ್ರೆಗಳಲ್ಲಿನ ದುಬಾರಿ ಚಿಕಿತ್ಸೆ ಜನಸಾಮಾನ್ಯರ ಪಾಲಿಗೆ ಗಗನಕುಸುಮದಂತೆ ಕಾಣಿಸುತ್ತದೆ. ಹಾಗಾದರೆ, ಜನಸಾಮಾನ್ಯರು ಉತ್ತಮ ಆರೋಗ್ಯಸೇವೆಯನ್ನು ಹೊಂದುವುದು ಹೇಗೆ? ಈ ಪ್ರಶ್ನೆಗೆ ಯೋಚಿಸಬಹುದಾದ ಉತ್ತರಗಳಲ್ಲೊಂದು – ಸಹಕಾರಿ ಆಸ್ಪತ್ರೆಗಳು.

ನಮಗೆಲ್ಲ ಸಹಕಾರಿ ಬ್ಯಾಂಕುಗಳು ಗೊತ್ತು. ಸಹಕಾರಿ ಆಸ್ಪತ್ರೆಗಳ ಪರಿಕಲ್ಪನೆ ನಮ್ಮಲ್ಲಿ ಕಡಿಮೆ. ಸಹಕಾರಿ ತತ್ವದಡಿ ಆರೋಗ್ಯಸೇವೆಗಳನ್ನು ಯಶಸ್ವಿಯಾಗಿ ಅಳವಡಿಸಬಹುದು ಎನ್ನುವುದಕ್ಕೆ ಉತ್ತಮ ಉದಾಹರಣೆ ಕೇರಳ. ಆರೋಗ್ಯ ಕ್ಷೇತ್ರದಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲೊಂದಾದ ಕೇರಳ ಸಹಕಾರಿ ಆಸ್ಪತ್ರೆ ವಲಯದಲ್ಲೂ ಮುಂದಿದೆ. ಅಲ್ಲಿ 40ಕ್ಕೂ ಹೆಚ್ಚು ಸಕ್ರಿಯವಾದ ಯಶಸ್ವಿ ಸಹಕಾರಿ ಆಸ್ಪತ್ರೆಗಳಿವೆ. ಹಾಗಾಗಿ ಕೇರಳೀಯರು ಸರ್ಕಾರಿ ವ್ಯವಸ್ಥೆಯ ಬದಲಾಗಿ ಖಾಸಗಿ ಆಸ್ಪತ್ರೆಗಳನ್ನು ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳಬೇಕಾಗಿಲ್ಲ. ಅವರಿಗೆ ಸಹಕಾರಿ ಆಸ್ಪತ್ರೆಗಳ ಪರ್ಯಾಯವೂ ಇದೆ.

ಸಹಕಾರಿ ಆಸ್ಪತ್ರೆಗಳು ಜನರಿಂದ ಜನರಿಗಾಗಿ ನಿರ್ಮಾಣವಾದಂತಹವು. ದೇಶದ ಅನೇಕ